# ಎರಡು ನದಿಗಳ ಮುದ್ದಿನ ನಗರ ಕಾನಾಸ್

ಪ್ರಕೃತಿಯ ಸೊಬಗಿನ ಜೊತೆಜೊತೆಗೆ ಇತಿಹಾಸದ ಕಥನಗಳ ಪಿಸುಗುಡುವ ಲಿಥುವೇನಿಯಾದ ಪುಟ್ಟ ಪಟ್ಟಣ ಕಾನಾಸ್‌. ಎರಡು ನದಿಗಳ ಸಂಗಮದಲ್ಲಿ ತಲೆಎತ್ತಿರುವ ಈ ನಗರದ ಕಟ್ಟಡ–ಕೋಟೆಗಳು ಕಥೆ ಹೇಳಲು ಕಾದಿರುವಂತೆ ಕಾಣುತ್ತವೆ.

■ ಸುಚೇತಾ ಕೆ. ನಾರಾಯಣ್

ನೆಮ್ಯುನಸ್ ಮತ್ತು ನೆರಿಸ್ ನದಿಗಳ ಸಂಗಮ ಸ್ಥಳದ ಸುತ್ತಲೂ ಹರಡಿ ನಿಂತಿರುವ ಪುಟ್ಟ ಪಟ್ಟಣ ಈ ಕಾನಾಸ್. ಬಾಲ್ಟಿಕ್ ದೇಶಗಳಲ್ಲಿ ಒಂದಾದ ಲಿಥುವೇನಿಯಾದ ಎರಡನೇ ದೊಡ್ಡ ನಗರ ಇದು. ಗಿಜಿಗುಡುವ ಬೀದಿಗಳು, ಲೆಕ್ಕವಿಲ್ಲದಷ್ಟು ಪ್ರವಾಸಿಗರು, ಹೆಜ್ಜೆಗೊಂದು ಕೆಫೆ, ಹೋಟೆಲ್‌ಗಳು, ಸದಾ ತುಂಬಿಕೊಂಡಿರುವ ಸಾರ್ವಜನಿಕ ಸಾರಿಗೆಗಳಂಥ ನಗರ ಚಿತ್ರಣಗಳಿಗೆ ಹೊರತಾಗಿತ್ತು ಕಾನಾಸ್. ಇದಕ್ಕೆ ಚಳಿಗಾಲ ಕಾರಣವೋ, ಸುರಿಯುತ್ತಿದ್ದ ಮಳೆಯೋ, ಕೋವಿಡ್ ಭಯವೋ ಅಥವಾ ಸಾಮಾನ್ಯವಾಗಿ ಈ ಊರು ಇರುವುದೇ ಹೀಗೋ ತಿಳಿಯದು. ಇದರ ಜನಸಂಖ್ಯೆ ಕೂಡ ಕಡಿಮೆಯೇ, ಸುಮಾರು ನಾಲ್ಕು ಲಕ್ಷ ಅಷ್ಟೆ.

ನಾವು ಕಾನಾಸ್ ಊರಿನ ಹೊರ ಭಾಗದಲ್ಲಿರುವ ಪುಟ್ಟ ವಿಮಾನ ನಿಲ್ದಾಣದಲ್ಲಿ ಬಂದಿಳಿದಾಗ ಕತ್ತಲಾವರಿಸಿತ್ತು. ಚಳಿಗಾಲದ ದಿನಗಳು. ಮರಗಳೆಲ್ಲ ಎಲೆಯುದುರಿಸಿಕೊಂಡು ಬೋಳಾಗಿ ನಿಂತಿದ್ದವು. ಮೋಡ ಕವಿದು ಇನ್ನೇನು ಮಳೆ ಹನಿಯುತ್ತದೆ ಎಂಬ ವಾತಾವರಣ. ಅಲ್ಲಿದ್ದ ಟಿಕೆಟ್ ಬೂತ್‌ನಲ್ಲಿ ಟಿಕೆಟ್ ಕೊಂಡುಕೊಂಡು, ‘29ಜಿ’ ಬಸ್ ಹತ್ತಿ ನಗರದೆಡೆಗೆ ಹೊರಟೆವು.

ಸುಮಾರು 45 ನಿಮಿಷಗಳ ಪ್ರಯಾಣದ ನಂತರ ನಾವು ಉಳಿದುಕೊಳ್ಳಬೇಕಿದ್ದ ಹೋಟೆಲ್‌ನ ಬಳಿಯೇ ಬಸ್ ನಿಲ್ಲಿಸಿತು. ಕೊರೆಯುವ ಚಳಿಯಲ್ಲಿ ಹೋಟೆಲ್ ಎಲ್ಲಿದೆಯೆಂದು ಹುಡುಕಿಕೊಂಡು ಅಲೆಯುವ ಪ್ರಮೇಯ ಬರಲಿಲ್ಲ.

ಕಾನಾಸ್‌ನಲ್ಲಿ ಮೊದಲ ಮುಂಜಾನೆ ಎದ್ದು ಕಾಫಿ–ತಿಂಡಿ ಮುಗಿಸಿ ಬೆಚ್ಚಗೆ ಕೋಟು, ಟೊಪ್ಪಿ, ಕೈಚೀಲ, ಬೂಟು ಧರಿಸಿ ಹೊರಬಂದೆವು. ಪಿರಿಪಿರಿ ಮಳೆಗೆ ಹೆದರದೆ, ‘ರಸ್ತೆಗಿಳಿದ ಮೇಲೆ ಮಳೆಯೇನು, ಚಳಿಯೇನು’ ಎಂದುಕೊಂಡು ‘9ನೇ ಕೋಟೆ’ ಎಂದು ಹೆಸರಾದ ಕೋಟೆಯೊಂದನ್ನು ನೋಡಲು ಹೊರಟೆವು.

1890ರ ಹೊತ್ತಿಗೆ ಕಾನಾಸ್‌ನ ಸುತ್ತ ಬಲಿಷ್ಠ ಎಂಟು ಕೋಟೆಗಳಿದ್ದವಂತೆ. 1902ರಲ್ಲಿ



ಸಂತ ಮೈಕೆಲ್ ದಿ ಆರ್ಕ್ ಏಂಜೆಲ್ಸ್ ಚರ್ಚ್

ಹದಿನಾಲ್ಕನೇ ಶತಮಾನದಲ್ಲಿ ಕಟ್ಟಲಾದ ಕಾನಾಸ್ ಕೋಟೆ

